**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿಮಿಸ್ 60/2023**

**ಪಿಡಬ್ಲೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಶ್ವೇತಾ |
| ಗಂಡನ ಹೆಸರು | - | ನಂದೀಶ |
| ವಯಸ್ಸು | - | 23 ವರ್ಷ |
| ವಾಸ | - | ಕೆ.ಆರ್.ನಗರ |

**ದಿನಾಂಕ 18-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ ಕೆ.ಬಿ.ಜಿ ಅರ್ಜಿದಾರರ ಪರ ವಕೀಲರಿಂದಃ**

ನನ್ನ ಹಾಗೂ ಎದುರುದಾರರ ವಿವಾಹ ದಿಃ 25.03.2019 ರಂದು ಕೆ.ಆರ್.ನಗರದ ನಂಜಮ್ಮ ಚನ್ನಬಸಪ್ಪ ಕಲ್ಯಾಣ ಮಂಟಪದಲ್ಲಿ ನೆರವೇರಿತು. ಆಗ ನನಗೆ 19 ವರ್ಷ ವಯಸ್ಸು. ನಮ್ಮದು ಹಿರಿಯರು ನೋಡಿ ಮಾಡಿದ ಮದುವೆ. ಮದುವೆ ಸಮಯದಲ್ಲಿ ನನಗೆ 200 ಗ್ರಾಂ ಚಿನ್ನ, ಮತ್ತು ನನ್ನ ಗಂಡನಿಗೆ 200 ಗ್ರಾಂ ಚಿನ್ನ ನನ್ನ ಪೋಷಕರು ನೀಡಿದ್ದಾರೆ ಮತ್ತು 1 ಕೆ.ಜಿ ಬೆಳ್ಳಿ, ಮೂರು ಲಕ್ಷ ನಗದು ಹಣ, ಒಂದು ವಾಚ್, 70 ಸಾವಿರ ಸೂಟ್ ಬಟ್ಟೆಗೆ ನನ್ನ ತಂದೆ ತಾಯಿ ನೀಡಿದ್ದಾರೆ. ಸುಮಾರು 30 ಲಕ್ಷ ಹಣ ಖರ್ಚು ಮಾಡಿ ನನ್ನ ಪೋಷಕರು ಮದುವೆ ಮಾಡಿದರು. ಮದುವೆಯಾದ ನಂತರ ಒಂದೂವರೆ ವರ್ಷಗಳ ಕಾಲ ಕನಕಪುರದ ನನ್ನ ಗಂಡನ ಮನೆಯಲ್ಲಿ ವಾಸವಿದ್ದೇವು ಮೊದಲು 6 ತಿಂಗಳು ನನ್ನನ್ನು ಚೆನ್ನಾಗಿ ನೋಡಿಕೊಂಡರು. ನಂತರ ನೀನು ಕಪ್ಪಗೆ ಇದ್ದೀಯಾ ಎಂದು ನನಗೆ ನನ್ನ ಗಂಡ ಹಾಗೂ ನನ್ನ ಅತ್ತೆ ಮಾವ ಹಿಂಸೆ ನೀಡಲು ಆರಂಭಿಸಿದರು. ನಿನ್ನ ತವರು ಮನೆಗೆ ಹೋಗಿ ಇನ್ನೂ 1 ಕೆ.ಜಿ ಚಿನ್ನ ಮಾಡಿಸಿಕೊಂಡು ಬಾ ಎಂದು ಒತ್ತಾಯ ಮಾಡುತ್ತಿದ್ದರು ನನಗೆ ಸೂಳೆ, ಮುಂಡೆ, ದರಿದ್ರದವಳು ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ನನಗೆ ಊಟ, ತಿಂಡಿ ಕೊಡುತ್ತಿರಲಿಲ್ಲ.

2. ನನ್ನ ಗಂಡನ ಅಕ್ಕ ನಂಜನಗೂಡಿಗೆ ಮದುವೆ ಮಾಡಿಕೊಟ್ಟಿದ್ದಾರೆ ಆಕೆ ನಮ್ಮ ಮನೆಗೆ ಬಂದು ನನಗೆ ಹೊಡೆದು ಬೈದು ನಿಮ್ಮ ತವರು ಮನೆಯಿಂದ ಕಾರು ಮತ್ತು ಚಿನ್ನ

ತೆಗೆದುಕೊಂಡು ಬಾ ಎಂದು ಅವಾಚ್ಯ ಶಬ್ದಗಳಿಂದ ಬೈದು ನನಗೆ ಹಿಂಸೆ ನೀಡಿದ್ದಾರೆ. ಆ ಸಮಯದಲ್ಲಿ ನನ್ನ ಗಂಡ, ನನ್ನ ಅತ್ತೆ ಮಾವ ಮತ್ತು ನನ್ನ ನಾದಿನಿ ನನಗೆ ಒತ್ತಾಯದಿಂದ ಮನೆಯಿಂದ ಹೊರಗೆ ಹಾಕಿದರು. ನನ್ನ ಗಂಡ ನನ್ನನ್ನು ಜೂನ್ ತಿಂಗಳಿನಲ್ಲಿ ನನ್ನನ್ನು ಕರೆದುಕೊಂಡು ಬಂದು ನನ್ನ ತವರು ಮನೆಗೆ ಬಿಟ್ಟರು. ನನ್ನ ಗಂಡ ನನ್ನ ತವರುಮನೆಯಲ್ಲಿ 3 ದಿನಗಳ ಕಾಲ ಇದ್ದರು. ನನ್ನ ತಂದೆ ನನಗೆ ಆಸ್ತಿ ಕೊಡುವುದಿಲ್ಲ ಆದ್ದರಿಂದ ನೀನು ಇಲ್ಲೇ ಇರು ನಾನೇ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿ ನನ್ನ ಗಂಡ ಹೇಳಿ ಹೋದರು ನಂತರ ಜುಲೈ ತಿಂಗಳಿನಲ್ಲಿ ನನ್ನ ತವರು ಮನೆಗೆ ಬಂದು 10 ದಿನಗಳ ಕಾಲ ನನ್ನ ಜೊತೆಯಲ್ಲಿ ಇದ್ದರು. ಆಗ ಆಸ್ತಿ ತೆಗೆದುಕೊಂಡು ಬಾ ವ್ಯವಹಾರ ಮಾಡಲು ನಿನ್ನ ತಂದೆಯಿಂದ 1 ಕೋಟಿ ರೂಪಾಯಿ ತೆಗೆದುಕೊಂಡು ಬಾ ಇಲ್ಲವಾದಲ್ಲಿ ಮನೆಗೆ ಬರಬೇಡ ಎಂದು ನನ್ನ ಗಂಡ ನನ್ನನ್ನು ಬಿಟ್ಟು ಹೋದ. ತದನಂತರ ನನ್ನ ದೂರವಾಣಿ ಸಂಖ್ಯೆಯನ್ನು ಆತ ಬ್ಲಾಕ್ ಮಾಡಿದ್ದಾನೆ.

3. ನ್ಯಾಯಕ್ಕೆ ಬನ್ನಿ ಎಂದು ನಮ್ಮ ಮನೆಯವರನ್ನು ಎದುರುದಾರ ಕರೆದರು ನನ್ನ ತಾಯಿ ನನ್ನ ಮಗಳು ಯಾವುದೇ ತಪ್ಪು ಮಾಡಿಲ್ಲ, ನೀವೇ ಅವರನ್ನು ನಮ್ಮ ಮನೆಯಲ್ಲಿ ಬಿಟ್ಟು ಹೋಗಿದ್ದೀರಾ ಎಂದು ಹೇಳಿದಾಗ ನನ್ನ ಗಂಡ ನೀವು ನ್ಯಾಯಕ್ಕೆ ಬರದಿದ್ದರೆ ನಾನು ಇನ್ನೊಂದು ಮದುವೆಯಾಗುತ್ತೇನೆ ಎಂದು ಹೆದರಿಸಿದ. ನಾವು ನ್ಯಾಯಕ್ಕೆ ಕನಕಪುರಕ್ಕೆ ಹೋಗಿದ್ದೆವು ಆಗ ನಮ್ಮನ್ನು ಮಾತನಾಡಲು ಬಿಡದೆ ನಮ್ಮನ್ನು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿ ಕಳುಹಿಸಿದರು. ನನ್ನ ತಂದೆ ತಾಯಿ ನಮ್ಮ ಮಗಳನ್ನು ನಿಮ್ಮ ಮನೆಯಲ್ಲಿ ಇಟ್ಟುಕೊಳ್ಳಿ ಎಂದು ಕೇಳಿದಾಗ ಮಗಳನ್ನು ಅಳಿಯನನ್ನು ನೀವೆ ಕನಕಪುರದಲ್ಲಿ ಮನೆ ಮಾಡಿ ಕಾರು ಕೊಟ್ಟು ಒಂದು ವ್ಯವಹಾರ ಕೊಟ್ಟು ಸಾಕಿಕೊಳ್ಳಿ ಇಲ್ಲವಾದರೆ ಒಂದು ಮುಚ್ಚಳಿಕೆ ಬರೆದುಕೊಡಿ ಇಲ್ಲವಾದರೆ ನಿಮ್ಮ ಮಗಳಿಗೆ ಏನೇ ಆದರೂ ನಾವು ಜವಾಬ್ದಾರರಲ್ಲ ಎಂದು ಹೇಳಿದರು. ನನ್ನ ಗಂಡನ ತಮ್ಮ ಹೇಮಂತ ಕನಕಪುರದಲ್ಲಿ ದೊಡ್ಡ ರೌಡಿ ಅವರ ಬೆಂಬಲದಿಂದ ನನ್ನ ಗಂಡ, ಅತ್ತೆ ಹಾಗೂ ಮಾವ ನಮಗೆ ಹಿಂಸೆ ನೀಡುತ್ತಿದ್ದಾರೆ.

4. ಪಂಚಾಯಿತಿಯಾದ ನಂತರ ನನ್ನ ಗಂಡ ನನ್ನ ಕರೆದುಕೊಂಡು ಹೋಗಲು ಬರಲಿಲ್ಲ ಇಲ್ಲಿಯವರೆಗೂ ನನಗೆ ನನ್ನ ಗಂಡ ಯಾವುದೇ ರೀತಿಯ ಜೀವನಾಂಶ ಕೊಟ್ಟಿಲ್ಲ ಹಾಗೂ ನನ್ನ ಖರ್ಚನ್ನು ಭರಿಸುತ್ತಿಲ್ಲ. ನನ್ನ ಗಂಡ ಪೀಶ್ ಫಾರ್ಮ್ ಮಾಡುತ್ತಾರೆ. ಅವರಿಗೆ ಸ್ವಂತ ಮನೆ, ಜಮೀನುಗಳು, ನಿವೇಶನಗಳು ಇದೆ. ತಿಂಗಳಿಗೆ ಅವರಿಗೆ ಸುಮಾರು 3 ಲಕ್ಷ ಆದಾಯ ಇರುತ್ತದೆ. ಅವರಿಗೆ ನನ್ನನ್ನು ಸಾಕುವ ಎಲ್ಲ ಸಾಮರ್ಥ್ಯವಿದ್ದರೂ ಸಹ ನನ್ನನ್ನು

ನಿರ್ಲಕ್ಷಿಸಿದ್ದಾರೆ ನಾನು ನನ್ನ ತವರು ಮನೆಯಲ್ಲಿದ್ದು, ನನ್ನ ತಂದೆ ತಾಯಿಗೆ ವಯಸ್ಸಾಗಿದೆ . ನನ್ನ ಪ್ರತಿದಿನದ ಖರ್ಚಿಗೆ ತಿಂಗಳಿಗೆ 50 ಸಾವಿರ ಅವಶ್ಯಕತೆ ಇದ್ದು ನನ್ನ ಗಂಡನಿಂದ ನನಗೆ ಜೀವನಾಂಶ ಕೊಡಿಸಬೇಕೆಂದು ಕೋರುತ್ತೇನೆ. ಮೊದಲಿಗೆ ನನ್ನ ಗಂಡ ನನ್ನ ಜೊತೆಯಲ್ಲಿ ಬಾಳಬೇಕೆಂದು ನನಗೆ ಇಷ್ಟವಿದೆ ಆದರೆ ಅವರು ಬರುತ್ತಿಲ್ಲ.

ನನ್ನ ಅರ್ಜಿಗೆ ಸಂಬಂದಿಸಿದಂತೆ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

| ದಾಖಲಾತಿಗಳು | ನಿಪಿ |
|---|---|
| ನನ್ನ ಹಾಗೂ ಎದುರುದಾರರ ವಿವಾಹ ಆಮಂತ್ರಣ ಪತ್ರಿಕೆಗಳು | 1 ಮತ್ತು 2 |
| ವಿವಾಹ ಸಮಯದಲ್ಲಿ ತೆಗೆದ 5 ಛಾಯಾಚಿತ್ರಗಳು | 3 ರಿಂದ 7 |
| ನನ್ನ ಗಂಡ ಪೀಶ್ ಪಾರ್ಮಿಂಗ್ ಮಾಡುತ್ತಿರುವ ಸ್ಥಳದ ಛಾಯಾಚಿತ್ರ | 8 |
| ಛಾಯಾಚಿತ್ರಗಳಿಗೆ ಸಂಬಂಧಿಸಿದ ಸಿಡಿ | 9 |
| ಛಾಯಾಚಿತ್ರಗಳು ಮತ್ತು ಸಿಡಿಗೆ ಸಂಬಂಧಿಸಿದ ಪ್ರಮಾಣ ಪತ್ರ | 10 |
| ನನ್ನ ಮಾವನ ಹೆಸರಿನಲ್ಲಿರುವ 1999-2000 ನೇ ಸಾಲಿನ ಆಸ್ತಿ ಸಂಖ್ಯೆ 1849 ರ ಡಿಮಾಂಡ್ ರೆಜಿಸ್ಟರ್ ನ ಎಕ್ಸಟ್ರಾಕ್ಟ ನ ದೃಡಿಕೃತ ನಕಲು | 11 |
| ನನ್ನ ಮಾವನ ಹೆಸರಿನಲ್ಲಿರುವ 2010-11 ನೇ ಸಾಲಿನ ಆಸ್ತಿ ಸಂಖ್ಯೆ 2534/1854 ರ ಆಸ್ತಿ ತೆರಿಗೆ ರೆಜಿಸ್ಟರ್ ನ ದೃಡಿಕೃತ ನಕಲು | 12 |
| ನನ್ನ ಮಾವನ ಹೆಸರಿನಲ್ಲಿರುವ 1999-2000 ನೇ ಸಾಲಿನ ಆಸ್ತಿ ಸಂಖ್ಯೆ 1852 ರ ಡಿಮಾಂಡ್ ರೆಜಿಸ್ಟರ್ ನ ಎಕ್ಸಟ್ರಾಕ್ಟ ನ ದೃಡಿಕೃತ ನಕಲು | 13 |
| ದಿಃ 31.10.2022 ರಂದು ಎದುರುದಾರರಿಗೆ ವಕೀಲರ ಮೂಲಕ ಕಳುಹಿಸಿದ ತಿಳುವಳಿಕೆ ಪತ್ರದ ಕಚೇರಿ ಪ್ರತಿ | 14 |
| ಅಂಚೆ ರಸೀದಿ | 15 |
| ಅಂಚೆ ಸ್ವೀಕೃತಿ | 16 |
| ನನ್ನ ಮಾವನ ಹೆಸರಿನಲ್ಲಿರುವ ಸ.ನಂ.84/1 ರ 2 ಪುಟದ ಗಣಕೀಕೃತ ಪಹಣಿ | 17 |
| ನನ್ನ ಮಾವನ ಹೆಸರಿನಲ್ಲಿರುವ ಸ.ನಂ.157/5 ರ 1 ಪುಟದ ಗಣಕೀಕೃತ | 18 |

| | |
|---|---|
| ಪಹಣಿ | |
| ನನ್ನ ಮಾವನ ಹೆಸರಿನಲ್ಲಿರುವ ಸ.ನಂ.607/10 ರ 1 ಪುಟದ ಗಣಕೀಕೃತ ಪಹಣಿ | 19 |
| ನನ್ನ ಮಾವನ ಹೆಸರಿನಲ್ಲಿರುವ ಸ.ನಂ.609/1 ರ 1ಪುಟದ ಗಣಕೀಕೃತ ಪಹಣಿ | 20 |
| ನನ್ನ ಮಾವನ ಹೆಸರಿನಲ್ಲಿರುವ ಸ.ನಂ.600/2 ರ 1 ಪುಟದ ಗಣಕೀಕೃತ ಪಹಣಿ | 21 |
| ನನ್ನ ಮಾವನ ಹೆಸರಿನಲ್ಲಿರುವ ಸ.ನಂ.609/14 ರ 1 ಪುಟದ ಗಣಕೀಕೃತ ಪಹಣಿ | 22 |
| ನನ್ನ ಮಾವನ ಹೆಸರಿನಲ್ಲಿರುವ ಸ.ನಂ.636 ರ 2 ಪುಟದ ಗಣಕೀಕೃತ ಪಹಣಿ | 23 |
| ನನ್ನ ಮಾವನ ಹೆಸರಿನಲ್ಲಿರುವ ಸ.ನಂ.767/1 ರ 2 ಪುಟದ ಗಣಕೀಕೃತ ಪಹಣಿ | 24 |
| ನಮ್ಮ ಮದುವೆ ಚತ್ರದ ಬುಕಿಂಗ್ ರಸೀದಿ | 25 |

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಪಾಟೀ ಸವಾಲು ಮಾಡಲು ತಯಾರು ಇಲ್ಲದ ಕಾರಣ ಹಾಗೂ ಮುಖ್ಯ ಅರ್ಜಿಗೆ ಯಾವುದೇ ತಕರಾರು ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ